ದಿನಾಂಕ 30-08-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 8, 9, 11 ಮತ್ತು 12ನೇ ಪ್ರತಿವಾದಿಗಳ ಪರ ವಕೀಲರಿಂದಃ-

ಜುಟ್ಟನಪಾಳ್ಯ ನಮ್ಮ ಊರಿನಿಂದ ಒಂದು ಮೈಲಿ ಆಗುತ್ತದೆ. 1994-95ರಲ್ಲಿ ನನ್ನ ಹೊಟ್ಟೆಯಲ್ಲಿ ಗೆಡ್ಡೆಯಾಗಿದ್ದು, ಆ ಕಾರಣ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿದ್ದೆ ಎಂದರೆ ಸರಿ. ಆ ಕಾಲಕ್ಕೆ ರಂಗಪ್ಪ ಜುಟ್ಟನಪಾಳ್ಯದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. 1994ರಲ್ಲಿ ರಂಗಪ್ಪನಿಗೆ ಮದುವೆಯಾಗಿ ಮಕ್ಕಳಾಗಿದ್ದವು. ರಂಗಪ್ಪನವರು ಜುಟ್ಟನಪಾಳ್ಯದಲ್ಲಿ ವಾಸವಿದ್ದ ಮನೆ ವೆಂಕಟರಮಣಪ್ಪರವರಿಂದ ಬಾಡಿಗೆಗೆ ತೆಗೆದುಕೊಂಡಿದ್ದ ಮನೆ ಎಂದರ ಸರಿ. ಆ ಮನೆಯಲ್ಲಿ ರಂಗಪ್ಪನ ಹೆಂಡತಿ, ಮಕ್ಕಳು ಜೊತೆಯಲ್ಲಿ ವಾಸವಿದ್ದರಾ ಎಂದರೆ ಸಾಕ್ಷಿಯು ಮೊದಲು ನಮ್ಮ ತಂದೆಯ ಮನೆಯಲ್ಲಿದ್ದರು, ನಂತರ ಬಾಡಿಗೆ ಮನೆಗೆ ಹೋದರು ಎಂದು ನುಡಿಯುತ್ತಾರೆ. ರಂಗಪ್ಪ ಬಾಡಿಗೆ ಮನೆಗೆ ನಿಮಗೆ ಶಸ್ತ್ರಚಿಕಿತ್ಸೆಯಾಗುವ ಎಷ್ಟು ವರ್ಷಗಳ ಮುಂಚೆ ಹೋದರು ಎಂದರೆ ಗೊತ್ತಿಲ್ಲ. ನಿಮಗೆ ಶಸ್ತ್ರಚಿಕಿತ್ಸೆಯಾದ 10 ವರ್ಷಗಳ ಮುಂಚೆಯೇ ರಂಗಪ್ಪ ಬಾಡಿಗೆ ಮನೆಗೆ ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಡಿ-1ರಲ್ಲಿ ತೋರಿಸಿದ ಮನೆಯಲ್ಲಿ ರಂಗಪ್ಪನ ಭಾಗದಲ್ಲಿ ರಂಗಪ್ಪ ಮತ್ತು ಅವರ ಕುಟುಂಬ ವಾಸವಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ.

ರಂಗಪ್ಪನವರಿಗೆ ಎಸ್.ವಿ.ಟಿ., ಕಾಲೋನಿಯಲ್ಲಿ ಒಂದು ಮನೆ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ತಂದೆಯ ಮನೆಯಲ್ಲೇ ಇರುವುದು ಎಂದು ನುಡಿಯುತ್ತಾರೆ. ನನ್ನ ಮಗಳ ಮದುವೆಗೆ ಮದುವೆಯ ಆಹ್ವಾನ ಪತ್ರಿಕೆಯನ್ನು ಎಸ್.ವಿ.ಟಿ., ಕಾಲೋನಿಯಲ್ಲಿದ್ದ ರಂಗಪ್ಪನ ಮನೆಗೆ ಹೋಗಿ ನಾನು ಕೊಟ್ಟಿದ್ದೇನೆ ಎಂದರೆ ಸರಿ. ನಿಮ್ಮ ಮಗಳ ಮದುವೆಯಾಗಿ 30

ವರ್ಷಗಳಾಗಿವೆ ಎಂದರೆ ಸಾಕ್ಷಿಯು ಅಷ್ಟೇ ಎಂದು ನಂತರ ನಮಗೆ ಅಷ್ಟು ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಂಗಪ್ಪ ನನ್ನ ಅಣ್ಣ.

ಸಾಕ್ಷಿಗೆ ಒಂದು ದಾಖಲೆ ತೋರಿಸಿ ಈ ದಾಖಲೆ ರಂಗಪ್ಪ ಮತ್ತು ಅವರ ಪತ್ನಿ ವಳ್ಳಿಯಪ್ಪ ಟೆಕ್ಸ್ ಟೈಲ್ಸ್ ನವರು ನೀಡಿರುವ ದಾಖಲೆ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿರುವ ಫೋಟೋಗಳು ನನ್ನ ಅಣ್ಣ ರಂಗಪ್ಪ ಮತ್ತು ಅವರ ಪತ್ನಿಯದ್ದು. ಆ ದಾಖಲೆ ರಂಗಪ್ಪನವರಿಗೆ ವಳ್ಳಿಯಪ್ಪ ಫ್ಯಾಕ್ಟರಿಯಿಂದ ಕೊಟ್ಟಿರುವ ದಾಖಲೆ ಎಂದರೆ ಸಾಕ್ಷಿಯು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಹೆಜ್ಜಾಲ ಗೇಟ್ ಬಳಿಯಿರುವ ವಳ್ಳಿಯಪ್ಪ ಟೆಕ್ಸ್ ಟೈಲ್ಸ್ ಫ್ಯಾಕ್ಟರಿಯನ್ನು ನೋಡಿದ್ದೇನೆ. ನಿಮ್ಮ ಊರಿನವರು ಹಲವಾರು ಜನರು ಸದರಿ ಫ್ಯಾಕ್ಟರಿಗೆ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅಣ್ಣ ರಂಗಪ್ಪ ವಳ್ಳಿಯಪ್ಪ ಟೆಕ್ಸ್ ಟೈಲ್ಸ್ ಫ್ಯಾಕ್ಟರಿಗೆ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿ. ಅವರು ಎಷ್ಟು ವರ್ಷ ಕೆಲಸ ಮಾಡಿದ್ದಾರೆ ಎಂದು ಗೊತ್ತಿಲ್ಲ. ರಂಗಪ್ಪ ವಳ್ಳಿಯಪ್ಪ ಟೆಕ್ಸ್ ಟೈಲ್ಸ್ ಫ್ಯಾಕ್ಟರಿಯಿಂದ ಬರುತ್ತಿದ್ದ ಸಂಬಳದಿಂದ ಕೆಲವು ಆಸ್ತಿಗಳನ್ನು ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. ರಂಗಪ್ಪನವರು ಎಸ್.ವಿ.ಟಿ ಕಾಲೋನಿಯಲ್ಲಿರುವ ಮನೆಯನ್ನು ಕಟ್ಟಿದ್ದು ವಳ್ಳಿಯಪ್ಪ ಟೆಕ್ಸ್ ಟೈಲ್ಸ್ ನ ಸಂಬಳದ ಹಣದಿಂದ ಎಂದರೆ ಗೊತ್ತಿಲ್ಲ.

ಮುನಿಮಾರಪ್ಪ ತಂದೆ ಮಾರಯ್ಯ ಹೆಜ್ಜಾಲದವರು ಗೊತ್ತಾ ಎಂದರೆ ಗೊತ್ತಿಲ್ಲ. ನನ್ನ ಅಣ್ಣ ಕೆಂಚಪ್ಪನವರು ಸರ್ವೇ ನಂ.15/3ರ ಹಳೆಯ ನಂ.15/1 ರಲ್ಲಿ 18 ಗುಂಟೆಯನ್ನು ಮುನಿಮಾರಯ್ಯರವರಿಗೆ ದಿನಾಂಕ 28.10.1980ರಲ್ಲಿ ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಮಾರಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನಾಂಕ 28.10.1980ರ ಕ್ರಯಪತ್ರದಲ್ಲಿ ಕೆಂಚಪ್ಪ, ನನ್ನ ಹಾಗೂ ಅಣ್ಣ ತಮ್ಮಂದಿರ ನಡುವೆ ಆದ ವಿಭಾಗದಲ್ಲಿ ನನ್ನ ಭಾಗಕ್ಕೆ ಬಂದ ಸ್ವತ್ತಿನ ಸರ್ವೇ ನಂ.15/1ರಲ್ಲಿ 18 ಗುಂಟೆ

ಎಂದು ಬರೆಸಿದ್ದಾರೆ ಎಂದರೆ ಸಾಕ್ಷಿಯು ಏನೇನೋ ಮಾಡಿದ್ದಾರೆ, ಪಾರಿಕತ್ ಆಗಿಲ್ಲ ಎಂದು ನುಡಿಯುತ್ತಾರೆ. 1980ರ ಕ್ರಯಪತ್ರದಲ್ಲಿ ಪೂರ್ವಕ್ಕೆ ಸೀನಪ್ಪನವರ ಭಾಗದ ಆಸ್ತಿ ಎಂದು ಬರೆಸಿದ್ದಾರೆ ಎಂದರೆ ಸಾಕ್ಷಿಯು ಅವರು ಏನೇನೋ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಯಾರು ಏನೇನು ಮಾಡಿರುವುದು ಎಂದರೆ ಸಾಕ್ಷಿಯು ಅಣ್ಣ, ತಮ್ಮಂದಿರು ಏನೇನು ಮಾಡಿಕೊಂಡಿದ್ದಾರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಕೇಸು ಹಾಕುವ ಕಾಲಕ್ಕೆ ವಕೀಲರು ಏನೇನು ದಾಖಲೆಗಳು ಬೇಕೆಂದು ಕೇಳಿದ್ದಾರೆ ಆ ಎಲ್ಲಾ ದಾಖಲೆಗಳನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ಸರ್ವೇ ನಂ.15/1 ಮುನಿಮಾರಯ್ಯನವರ ಹೆಸರಿಗೆ ಪಹಣಿ ಹೇಗೆ ಬಂತು ಎಂದು ನಿಮ್ಮ ವಕೀಲರನ್ನು ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಮುನಿಮಾರಯ್ಯನವರ ಹೆಸರಿನಲ್ಲಿರುವ ಪಹಣಿಗಳನ್ನು ತೆಗೆಸಿ ವಕೀಲರಿಗೆ ತೋರಿಸಿ ಪರಿಶೀಲನೆ ಮಾಡಿಸಿದ್ದೇನೆ. ಎಂ.ಆರ್.25/1991-92ರಂತೆ ಸರ್ವೇ ನಂ.15/1ರಲ್ಲಿ 18 ಗುಂಟೆ ರಂಗಪ್ಪನ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ಗೊತ್ತಿದೆ ಎಂದು ನುಡಿದು, ನಂತರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮುನಿಮಾರಯ್ಯನವರು ಖರೀದಿ ಮಾಡಿದ್ದ 18 ಗುಂಟೆಯನ್ನು ದಿನಾಂಕ 23.09.1991ರಲ್ಲಿ ನನ್ನ ಅಣ್ಣ ರಂಗಪ್ಪನವರಿಗೆ ಮಾರಾಟ ಮಾಡಿದರು ಎಂದರೆ ಗೊತ್ತಿಲ್ಲ. ಸದರಿ 18 ಗುಂಟೆ ಎಂ.ಆರ್.25/1991-92ರಂತೆ ಪಹಣಿ ರಂಗಪ್ಪನ ಹೆಸರಿಗೆ ಬರುತ್ತಿದೆ ಎಂದರೆ ಸಾಕ್ಷಿಯು ಎಲ್ಲಾ ನಮ್ಮ ತಂದೆಯ ಹೆಸರಿನಲ್ಲಿತ್ತು, ಅವರು ಹೇಗೆ ಮಾಡಿಕೊಂಡರು ಎಂದು ನುಡಿಯುತ್ತಾರೆ.

ನಿಪಿ-9ರಲ್ಲಿ ತೋರಿಸಿರುವ ರಂಗಪ್ಪ ಬಿನ್ ದೊಡ್ಡತಿಮ್ಮಯ್ಯ ಎಂದರೆ ನನ್ನ ಅಣ್ಣ. ನಿಪಿ-9 ದಾಖಲೆಯಲ್ಲಿರುವ ಎಂ.ಆರ್.25/1991-92ನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ನಮ್ಮ ಲಾಯರ್ ಗೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಆರ್.ಆರ್.ಟಿ.ಸಿ.ಆರ್.1081/2005-06ನ್ನು ರಂಗಪ್ಪನವರು

ತಹಶೀಲ್ದಾರರ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಪಹಣಿಯಲ್ಲಿ ತಪ್ಪು ನಮೂದು ಬಂದಿದ್ದರಿಂದ ರಂಗಪ್ಪನವರು ಆರ್.ಆರ್.ಟಿ.ಸಿ.ಆರ್.1081/2005-06ನ್ನು ಸಲ್ಲಿಸಿ ಸರಿಪಡಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. 18 ಗುಂಟೆಯ ಜೊತೆ ಸರ್ವೇ ನಂ.15/1ರಲ್ಲಿ 24 ಗುಂಟೆ ರಂಗಪ್ಪನ ಹೆಸರಿಗೆ ಎಂ.ಆರ್.81-1996-97ರಂತೆ ಖಾತೆ ಬಂದಿತ್ತು ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದಂತೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ 24 ಗುಂಟೆ ರಂಗಪ್ಪನಿಗೆ ವಿಭಾಗದಲ್ಲಿ ಬಂದಿದ್ದು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಸರ್ವೇ ನಂ.15/1ರಲ್ಲಿ ಒಟ್ಟು 1 ಎಕರೆ 2 ಗುಂಟೆ ರಂಗಪ್ಪನಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ 1 ಎಕರೆ 2 ಗುಂಟೆಯನ್ನು ರಂಗಪ್ಪ ಪ್ರತಿವಾದಿ 14 ರಾಘವೇಂದ್ರರವರಿಗೆ ಕ್ರಯಕ್ಕೆ ಕೊಟ್ಟರು ಎಂದರೆ ಸಾಕ್ಷಿಯು ಗೊತ್ತಿಲ್ಲದಂತೆ ಮಾಡಿದ್ದಾರೆ ಎಂದು ನುಡಿಯುತ್ತಾರೆ.ಅವರು ಕ್ರಯ ಮಾಡಿರುವುದು 2007ರಲ್ಲಿ ಎಂದರೆ ಸಾಕ್ಷಿಯು ಏನೇನೋ ಬರವಣಿಗೆಯಲ್ಲಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 14ನೇ ಪ್ರತಿವಾದಿಗೆ ಮಾಡಿರುವ ಕ್ರಯಪತ್ರ ಸರಿಯಿಲ್ಲ ಎಂದು ಈ ದಾವೆಯಲ್ಲಿ ಪ್ರಶ್ನಿಸಿದ್ದೇವೆ. ಸರ್ವೇ ನಂ.15/1 ರಂಗಪ್ಪನಿಗೆ ವಿಭಾಗದಲ್ಲಿ ಬಂದ ಸ್ವಯಾರ್ಜಿತ ಸ್ವತ್ತು, ಅದನ್ನು ನಾನು ಪ್ರಶ್ನಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. 1968ರಲ್ಲಿ ವಿಭಾಗ ಆಗಿದೆ ಎಂದು ನಿಮಗೆ 1968ರಲ್ಲೇ ಗೊತ್ತಿತ್ತು ಎಂದರೆ ಸಾಕ್ಷಿಯು ವಿಭಾಗವೇ ಆಗಿಲ್ಲ ಎಂದು ನುಡಿಯುತ್ತಾರೆ. ಎಲ್ಲವನ್ನೂ ಮುಚ್ಚಿಟ್ಟು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಸರ್ವೇ ನಂ.39 1 ಎಕರೆ 10 ಗುಂಟೆ ಪಹಣಿ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ನಮ್ಮ ತಂದೆಯ ಹೆಸರಿನಲ್ಲಿ ಇತ್ತು, ಅಣ್ಣಂದಿರ ಮಕ್ಕಳು ಬೇರೆ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಅವರು ಅದನ್ನು ಯಾವಾಗ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ನಿಪಿ-14ರಂತೆ ಸರ್ವೇ

ನಂ.39 1 ಎಕರೆ 10 ಗುಂಟೆ ಚಿಕ್ಕಮ್ಮನ ಹೆಸರಿಗೆ ಹೇಗೆ ಬಂತು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಅವರು ಹೇಗೇಗೋ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಅವರು ಯಾವ ವರ್ಷ ಆ ರೀತಿ ಮಾಡಿಕೊಂಡಿದ್ದಾರೆ ಎಂದು ಗೊತ್ತಿಲ್ಲ. ಚಿಕ್ಕಮ್ಮನ ಹೆಸರಿಗೆ ಬರುವ ಮುಂಚೆ ಅದು ರಂಗಪ್ಪನ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ನಮ್ಮ ತಂದೆಯ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ನಿಪಿ-13ರಂತೆ ಚಿಕ್ಕಮಾರಯ್ಯನ ಹೆಸರಿಗೆ ಎಂ.ಆರ್.7/1982-83ರಂತೆ ಖಾತೆ ಬರುತ್ತಿದೆ ಎಂದರೆ ಸಾಕ್ಷಿಯು ಗೊತ್ತಿಲ್ಲ, ಭಾಗ ಕೊಡಬೇಕಾಗುತ್ತದೆ ಎಂದು ಈ ರೀತಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಚಿಕ್ಕಮಾರಯ್ಯನವರ ಹೆಸರಿನಿಂದ ಬಸಮ್ಮನ ಹೆಸರಿಗೆ ಬರುತ್ತಿದೆ ಎಂದರೆ ಗೊತ್ತಿಲ್ಲ.

1977ರಲ್ಲೇ ಲಕ್ಷ್ಮಮ್ಮ ಕೋಂ ಗಿರಿಯಪ್ಪ ಎಂ.ಆರ್.6/1977-78ರಂತೆ ದಾಖಲೆ ಇತ್ತು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಗಿರಿಯಪ್ಪನ ಪತ್ನಿ ಲಕ್ಷ್ಮಮ್ಮ ನಮ್ಮ ಕುಟುಂಬದವರಲ್ಲ. ಚಿಕ್ಕಮಾರಯ್ಯ ನಮ್ಮ ಕುಟುಂಬದವರಲ್ಲ. ಸರ್ವೇ ನಂ.39 1 ಎಕರೆ 10 ಗುಂಟೆ ನಿಮಗೆ ಮತ್ತು ರಂಗಪ್ಪನವರಿಗೆ ಮಾತ್ರ ಏಕೆ ಬರಬೇಕು ಎಂದರೆ ಸಾಕ್ಷಿಯು ನಮ್ಮ ಮದುವೆಗೆ ಅಣ್ಣ, ತಮ್ಮಂದಿರೆಲ್ಲಾ ಸೇರಿ ಬಿಟ್ಟಿದ್ದರು ಎಂದು ನುಡಿಯುತ್ತಾರೆ. ನಮ್ಮ ಮದುವೆಯನ್ನು ರಂಗಪ್ಪನವರೇ ಮಾಡಿದ್ದು, ನನ್ನ ಗಂಡನ ಮನೆಯವರಲ್ಲ ಎಂದರೆ ಸರಿಯಲ್ಲ. ದಿನಾಂಕ 12.09.1977ರ ಕ್ರಯಪತ್ರದಲ್ಲಿ ನಮ್ಮ ತಂಗಿಯ ಮದುವೆಗೆ ಮಾಡಿದ್ದ ಕೈ ಸಾಲ ತೀರಿಸುವ ಸಲುವಾಗಿ ಸರ್ವೇ ನಂ.39ರಲ್ಲಿ 1 ಎಕರೆ 10 ಗುಂಟೆಯನ್ನು ಮಾರಾಟ ಮಾಡುತ್ತಿದ್ದೇವೆ ಎಂದು ಬರೆದಿದೆ ಎಂದರೆ ಸರಿಯಲ್ಲ. ದಿನಾಂಕ 12.09.1977ರಲ್ಲಿ ಖಾತೆ ರಂಗಪ್ಪನ ಹೆಸರಿನಲ್ಲಿ ಇಲ್ಲದ ಕಾರಣ ಕೊಂಡುಕೊಳ್ಳುವವರು ಮೂರು ಜನರೂ ಕ್ರಯಪತ್ರ ಬರೆದುಕೊಡಿ ಎಂದು ಕೇಳಿದ ಕಾರಣ ಕೆಂಚಪ್ಪ, ಸೀನಪ್ಪ, ರಂಗಪ್ಪ ಮೂರು ಜನರೂ ಕ್ರಯಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ಮೂರು ಜನ ಸಹೋದರರು ಲಕ್ಷ್ಮಮ್ಮ ಕೋಂ ಗಿರಿಯಪ್ಪನವರಿಗೆ ದಾವಾ ಐಟಂ ನಂ.3ನ್ನು

ಮಾರಾಟ ಮಾಡಿದರು ಎಂದರೆ ಸರಿಯಲ್ಲ. ಸ್ವತ್ತಿನ ಸ್ವಾಧೀನವನ್ನು ಲಕ್ಷ್ಮಮ್ಮನವರಿಗೆ ಕೊಟ್ಟಿದ್ದು, ಖಾತೆ ಅವರ ಹೆಸರಿಗೆ ಬಂತು ಎಂದರೆ ಸರಿಯಲ್ಲ.

ಸದರಿ ಆಸ್ತಿಯನ್ನು ಲಕ್ಷ್ಮಮ್ಮನವರು ಚಿಕ್ಕಮಾರಯ್ಯ ಬಿನ್ ದೊಡ್ಡಪುಟ್ಟಯ್ಯರವರಿಗೆ ಮಾರಾಟ ಮಾಡಿದರು ಎಂದರೆ ಸರಿಯಲ್ಲ. ಚಿಕ್ಕಮಾರಯ್ಯರವರ ಹೆಸರಿಗೆ ಖಾತೆ ಸಹ ಬಂದಿದ್ದು, ಅದು ನನಗೆ ಚೆನ್ನಾಗಿ ಗೊತ್ತಿದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ದಿನಾಂಕ 04.07.2005ರಲ್ಲಿ ರಂಗಪ್ಪನವರು ಬಸಮ್ಮ ಮತ್ತು ಮಕ್ಕಳಿಂದ ಖರೀದಿ ಮಾಡಿದರು ಎಂದರೆ ಸರಿಯಲ್ಲ. ರಂಗಪ್ಪ ಬದುಕಿರುವವರೆಗೂ ಖಾತೆ ಅವರ ಹೆಸರಿನಲ್ಲಿ ಇತ್ತು, ನನ್ನ ತಂದೆಯ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.3 ರಂಗಪ್ಪನ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ರಂಗಪ್ಪನ ಮರಣಾ ನಂತರ ಅವರ ಪತ್ನಿಯ ಹೆಸರಿಗೆ 15 ವರ್ಷಗಳಿಂದ ಸದರಿ ಆಸ್ತಿಯ ಖಾತೆ ಬರುತ್ತಿದೆ ಎಂದರೆ ಸಾಕ್ಷಿಯು ಸುಳ್ಳಾಗಿ ಮಾಡಿಕೊಡಿದ್ದಾರೆ ಎಂದು ನುಡಿಯುತ್ತಾರೆ. ಜಮೀನು ನಮಗೆ ಸೇರಬೇಕು ನಮ್ಮ ಹೆಸರಿಗೆ ಖಾತೆ ಮಾಡಿ ಎಂದು ನೀವು ಅರ್ಜಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ನಮ್ಮ ತಂದೆಯ ಹೆಸರಿನಲ್ಲಿ ಖಾತೆ ಇತ್ತು, ಅವರು ಒಳಗೊಳಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.